ಇ) ಟೆಂಡರ್‌ಗಳನ್ನು ಕರೆಯಲಾಗಿದೆಯೇ.

ಈ) ಹಾಗಿದ್ದಲ್ಲಿ ಯಾವಾಗ ಕರೆಯಲಾಗಿದೆ.

ಉ) ನಿರ್ಮಾಣ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು.

ಊ) ಕಟ್ಟಡವ ನಿರ್ಮಾಣ ಕಾರ್ಯ ಯಾವಾಗ ಮುಗಿಯುಬಹುದು.

ಋ) ಈ ಕೆಲಸಕ್ಕಾಗಿ 1991-92ರ ಸಾಲಿನಲ್ಲಿ ನಿಗದಿಗೊಳಿಸಿರುವ ಹಣವೆಷ್ಟು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು - ನಕ್ಷೆ ಮತ್ತು ಅಂದಾಜು ವೆಚ್ಚವನ್ನು ಕೋಲಾರದ ಜಿಲ್ಲಾ ಪರಿಷತ್ತಿನವರು ಮಂಜೂರು ಮಾಡಿರುತ್ತಾರೆ.

ಆ) ರೂ. 6,79,000-00

ಇ) ಇಲ್ಲ - ನಿರ್ಮಾಣದ ಕೆಲಸವನ್ನು ಕರ್ನಾಟಕ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ನಿಗೆ ವಹಿಸಲಾಗಿದೆ.

ಈ) 'ಇ'ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಉ) 1989ರ ಸೆಪ್ಟೆಂಬರ್‌ನಲ್ಲಿ ನಿರ್ಮಾಣ ಕೆಲಸ ಪ್ರಾರಂಭವಾಗಿದೆ.

ಊ) ಕೆಲಸವು ಶೀಘ್ರದಲ್ಲಿಯೇ ಮುಗಿಯುವ ನಿರೀಕ್ಷೆ ಇದೆ.

ಋ) ಈ ನಿರ್ಮಾಣ ಕೆಲಸಕ್ಕಾಗಿಯೇ ಪ್ರತ್ಯೇಕ ಹಣವಕಾಶ ಮಾಡಿಕೊಂಡಿಲ್ಲ, ಆದರೂ 1991-92ರ ಜಿಲ್ಲಾ ಘಟಕದ ಆಯವ್ಯಯದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕಾಗಿ 15-00 ಲಕ್ಷ ರೂ.ಗಳ ಅನುವು ಮಾಡಿದೆ.

ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ಬೀಗ ಮುದ್ರೆ

3706 - ಶ್ರೀ ಸಿ. ಬೈರೇಗೌಡ (ವೇಮಗಲ್) ; ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿಯಲ್ಲಿ ದಿ. 12-4-90 ರಿಂದ 23-4-90ರವರೆಗೆ ಬೀಗ ಮುದ್ರೆ ಘೋಷಿಸಲು ಕಾರಣಗಳೇನು?

ಆ) ಬೀಗ ಮುದ್ರೆಯ ನಿರ್ಣಯವನ್ನು ಯಾವಾಗ ತೆಗೆದುಕೊಳ್ಳಲಾಯಿತು? ಯಾರು ತೆಗೆದುಕೊಂಡರು ? ಯಾರ ಸಲಹೆಯ ಮೇಲೆ ತೆಗೆದುಕೊಂಡರು?

ಇ) ಬೀಗಮುದ್ರೆಯು ಕಾನೂನು ಬದ್ಧವಾಗಿದೆಯೇ ಅಥವಾ ಕಾನೂನು ಬಾಹಿರವೇ ಕಾನೂನು ಬಾಹಿರವಾಗಿದ್ದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಏನು ಕ್ರಮ ಜರುಗಿಸಲಾಯಿತು?

ಈ) ಬೀಗ ಮುದ್ರೆಯ ಅವಧಿಗೆ ನೌಕರರಿಗೆ ವೇತನವನ್ನು ನೀಡಲಾಯಿತೆ ?

ಉ) ಬೀಗ ಮುದ್ರೆಯ ಅವಧಿಯ 12 ದಿನಗಳಲ್ಲಿ ಉಂಟಾದ ಒಟ್ಟು ನಷ್ಟವೆಷ್ಟು?

ಊ) ಇಬ್ಬರು ಅಧಿಕಾರಿಗಳ ಸೇವೆಯನ್ನು ವಿಚಾರಣೆ ನಡೆಸದೆ ಬರ್ತಪ್‌ಗೊಳಿಸಿರುವುದು ನಿಜರೇ?

ಋ) ಇಬ್ಬರು ಅಧಿಕಾರಿಗಳನ್ನು ಕಾನೂನು ಬಾಹಿರರಾಗಿ ಬರ್ತಪ್‌ಗೊಳಿಸಿರುವುದರ ವಿರುದ್ಧ ನೌಕರರು ಕಾರ್ಯನಿಲುಗಡೆ ಮಾಡಿ ವಿರೋಧ ವ್ಯಕ್ತಪಡಿಸಿರುವುದು ನಿಜವೇ?

ೠ) ಬರ್ತಪ್‌ಗೊಳಿಸಿದ ಅಧಿಕಾರಿಗಳನ್ನು ಮತ್ತೆ ಸೇವೆಯಲ್ಲಿ ಮುಂದುವರಿಸಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ನೌಕರರು ಮುಷ್ಕರ ಹೂಡಿದಾಗ ಏಕೆ ಈ ನಿರ್ಣಯ ತೆಗೆದುಕೊಳ್ಳಲಿಲ್ಲ ?

ಏ) *ಸಾರ್ವಜನಿಕ ಉದ್ಯಮಿಗಳ ಅಧಿಕಾರಿಗಳನ್ನು ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಭಾಗವಹಿಸದಂತೆ ನಿಷೇಧಿಸಿರುವುದು ನಿಜವೇ?*

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರು): ಅ) ಮೈಸೂರು ಕಾಗದ ಕಾರ್ಖಾನೆ ಭದ್ರಾವತಿಯಲ್ಲಿ ಈ ಕೆಳಕಂಡ ಕಾರಣಗಳಿಂದ 12-4-90ರಿಂದ 23-4-90ರವರೆಗೆ ಬೀಗಮುದ್ರೆಯನ್ನು ಘೋಷಿಸಲಾಯಿತು : 1) 12-4-90 ರಿಂದ ಕಾರ್ಮಿಕರ ಕಾನೂನು ಬಾಹಿರ ಮತ್ತು ಮಿಂಚಿನ ಟೂಲ್‌ಡೌನ್ ಮುಷ್ಕರ ಮಾಡಿದರು.

2) ಯೂನಿಯನ್‌ಗಳ ಒಳಜಗಳ ಮತ್ತು ಮಿಲ್ಲಿನ ಆವರಣದಲ್ಲಿ ಅಶಿಸ್ತು.

3) ನೌಕರರ ಚಿತಾವಣೆ, ಅಶಿಸ್ತು, ಹಿಂಸೆಯ ಬೆದರಿಕೆ ಹಾಗೂ ಮಿಷನರಿ ಮತ್ತು ಇತರೆ ಪದಾರ್ಥಗಳಿಗೆ ಹಾನಿ ಉಂಟು ಮಾಡುವ ಸಂಭವ.

ಆ) ಬೀಗ ಮುದ್ರೆಯ ನಿರ್ಣಯವನ್ನು ದಿ. 12-4-90 ರಂದು ಆಡಳಿತ ವರ್ಗ ತೆಗೆದುಕೊಂಡಿತು.

ಇ) ಬೀಗ ಮುದ್ರೆಯು ಕಾನೂನು ಬದ್ಧವಾಗಿದೆ ಆದ್ದರಿಂದ ಇತರೆ ವಿಷಯಗಳು ಉದ್ಭವಿಸುವುದಿಲ್ಲ.

ಈ) ಬೀಗಮುದ್ರೆಯ ಅವಧಿಗೆ ನೌಕರರಿಗೆ ಕಷ್ಟ ಕಾಲದ ಭತ್ಯೆಯನ್ನು ಅಂದರೆ ಸಂಬಳದ ಶೇಕಡ 80 ರಷ್ಟು (ವೇತನ ಮತ್ತು ತುಟ್ಟಿ ಭತ್ಯೆ) ನೀಡಲಾಯಿತು.

ಉ) ರೂ.231 ಲಕ್ಷ.

ಊ) ಹೌದು.

ಋ) ಇಲ್ಲ.

ೠ) ಹೌದು. ನೌಕರರು ಈ ವಿಷಯಕ್ಕಾಗಿಯೇ ಮುಷ್ಕರ ಹೂಡಿರಲಿಲ್ಲ.

ಏ) ಇಲ್ಲ.

ಎನ್.ಜಿ.ಇ.ಎಫ್. ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ

3724 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಎನ್.ಜಿ.ಇ.ಎಫ್ ಮತ್ತು ಮೈಸೂರು ಲ್ಯಾಂಪ್ಸ್ ವರ್ಕ್ಸನ ಅಂಗ ಸಂಸ್ಥೆಗಳನ್ನು ಕುಣಿಗಲ್ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆ ಇದೆಯೇ?*

ಆ) *ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?*

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.